ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಕೇಂದ್ರ ಕಾರಾಗೃಹದಲ್ಲಿರುವ ಜಾಗವನ್ನು ಉದ್ಯಾನವನವನ್ನಾಗಿ ಮಾಡಲು ತೀರ್ಮಾನ ಮಾಡಿರುವುದಕ್ಕೆ, ಸರ್ಕಾರಿ ಆಜ್ಞೆ ಹೊರಡಿಸಿರುವುದಕ್ಕೆ ಸ್ವಾಗತ ಮಾಡುತ್ತಾ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ರೇಸ್ ಕೋರ್ಸ್ ಸ್ಥಳಾಂತರ ಮಾಡುವ ಬಗ್ಗೆ ಗೃಹ ಇಲಾಖೆಗೆ ಸ್ವಲ್ಪ ಸಂಬಂಧಪಡುತ್ತದೆ. ಏಕೆಂದರೆ ನಾನು ಗೃಹ ಇಲಾಖೆಗೆ ಸಚಿವನಾಗಿದ್ದಾಗ ಅದು ನನ್ನ ಇಲಾಖೆಗೆ ಸಂಬಂಧಪಟ್ಟಿತ್ತು. ಪೋಲೀಸ್ ಕಮೀಷನರ್, ಹೋಮ್ ಕಮೀಷನರ್, ಹಣಕಾಸಿನ ಕಾರ್ಯದರ್ಶಿ ಇವರುಗಳೆಲ್ಲಾ ಅದಕ್ಕೆ ಸ್ವೀವರ್ಡ್ಸ್‌ಗಳಾಗಿರುತ್ತಾರೆ. ಇದನ್ನು ಸ್ಥಳಾಂತರ ಮಾಡುತ್ತೇನೆಂದು ಯಾರ್ಯಾರು ಹೇಳಿದ್ದಾರೆ ಅವರುಗಳೆಲ್ಲಾ ಶಿಫ್ಟ್ ಆಗಿಹೋಗಿದ್ದಾರೆ. ಆದ್ದರಿಂದ ತಾವು ಭರವಸೆ ಕೊಡದಿರುವುದು ಒಳ್ಳೆಯದು. ನಮ್ಮ ಸರ್ಕಾರದಲ್ಲಿ ಬಹಳ ಒಳ್ಳೆಯ ದಕ್ಷ ಅಧಿಕಾರಿಗಳಾದ ಅಡಿಷನಲ್ ಚೀಫ್ ಸೆಕ್ರೆಟರಿ ಮುತ್ತಣ್ಣನವರು ಇದ್ದರು, ಅವರು ಅಕಾಲದಲ್ಲಿ ಸತ್ತು ಹೋದರು. ಅವರು ವಿಚಾರಗಳನ್ನೆಲ್ಲಾ ತಿಳಿದುಕೊಂಡಿದ್ದಂಥ ಬಹಳ ಪ್ರಾಮಾಣಿಕವಾದ ವ್ಯಕ್ತಿ. ಅವರು ಇದನ್ನು ಸ್ಥಳಾಂತರ ಮಾಡಬೇಕೆಂದು ಹೇಳಿದ ತಕ್ಷಣವೇ, ನೋಡಿ ಸಾರ್ ಹುಷಾರ್, ಮುಖ್ಯಮಂತ್ರಿಗಳಿಗೆ ಹೇಳಿ, ಶಿಫ್ಟ್ ಮಾಡುತ್ತೇನೆಂದು ಅನೌನ್ಸ್ ಮಾಡಿದರೆ ಖಂಡಿತವಾಗಿ ಅವರು ಆರು ತಿಂಗಳಿನೊಳಗೆ ಹೋಗುತ್ತಾರೆಂದು. ಹಾಗಾದರೆ ತಾವೇ ಲೆಕ್ಕಾ ಮಾಡಿಕೊಳ್ಳಿ.

ಶ್ರೀ ಎಸ್.ಎಂ. ಕೃಷ್ಣ:- ಒಂದು ವಿಧದಲ್ಲಿ ನಾನು ಪುಣ್ಯಶಾಲಿ. ಏಕೆಂದರೆ, ನಾನು ಶಿಫ್ಟ್ ಮಾಡುತ್ತೇನೆಂದು ಹೇಳಿ ಎರಡು ವರ್ಷಗಳಾಯಿತು. ಆದರೆ ನಾನು ಇನ್ನೂ ಸ್ಥಳಾಂತರವಾಗಲಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಭಾಗ್ಯಜ್ಯೋತಿ ಕಾರ್ಯಕ್ರಮ

103(790) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ವರ್ಷ ಭಾಗ್ಯಜ್ಯೋತಿ ಕಾರ್ಯಕ್ರಮದಲ್ಲಿದ್ದ ಗುರಿಯೇನು ಮತ್ತು ಸಾಧನೆ ಏನು; (ವಿವರಣೆ ನೀಡುವುದು);

ಆ) ಕಳೆದ ಸಾರಿ ಈ ಯೋಜನೆಯಡಿಯಲ್ಲಿ ಹಣ ಖರ್ಚಾಗದೆ ವಾಪಸ್ ಆಗಿದೆಯೆ; ಆಗಿದ್ದರೆ ಕಾರಣವೇನು;

ಇ) ಈ ವರ್ಷದ ಈ ಕಾರ್ಯಕ್ರಮದಡಿ ಗುರಿ ಹಾಗೂ ಸಾಧನೆಯ ವಿವರವನ್ನು ನೀಡುವುದು; (ಕ್ಷೇತ್ರವಾರು ನೀಡುವುದು)

ಈ) ಚಾಮರಾಜನಗರ ಜಿಲ್ಲೆ ದೊಡ್ಡರಾಯ ಪೇಟೆ 220 ಕೆ.ವಿ. ಸ್ಟೇಷನ್ ಕಾಮಗಾರಿ ಯಾವಾಗ ಮುಕ್ತಾಯವಾಯಿತು;

ಉ) ಹೊನ್ನಹಳ್ಳಿ 33 ಕೆ.ವಿ. ಸ್ಟೇಷನ್‌ಗೆ 66 ಕೆ.ವಿ.ಗೆ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೆ; ತೆಗೆದುಕೊಂಡಿದ್ದರೆ ಯಾವಾಗ ಕೈಗೊಳ್ಳಲಾಗುವುದು;

ಊ) ಚಾಮರಾಜನಗರ ತಾಲ್ಲೂಕು ಅಟ್ಟಿಗೊಳ್ಳಿಪುರ ಮತ್ತು ಪಣ್ಯದ ಹುಂಡಿ ಹೊಸ 33 ಕೆ.ವಿ. ಸ್ಟೇಷನ್ ಕೆಲಸ ಯಾವಾಗ ಪ್ರಾರಂಭ ಮಾಡಲಾಗುವುದು; (ವಿವರ ನೀಡುವುದು).

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) 1999-2000 ರಿಂದ ಈಚೆಗೆ ರಾಜ್ಯದಲ್ಲಿ ಭಾಗ್ಯಜ್ಯೋತಿ ಯೋಜನೆ ಜಾರಿಯಲ್ಲಿರುವುದಿಲ್ಲ. ಕೇವಲ ಕುಟೀರ ಜ್ಯೋತಿ ಯೋಜನೆಯನ್ನು ಮಾತ್ರ ಜಾರಿಗೊಳಿಸಲಾಗುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ವರ್ಷ (2001-02) ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ 5000 ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಆದರೆ, ಸಂಬಂಧಪಟ್ಟ ತಾಲ್ಲೂಕು ಪಂಚಾಯತ್ / ಜಿಲ್ಲಾ ಪಂಚಾಯತ್‌ಗಳು ಯಾವುದೇ ಫಲಾನುಭವಿಗಳ ಪಟ್ಟಿಯನ್ನು ನೀಡದಿದ್ದ ಕಾರಣ, ಸದರಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಾಗಲಿಲ್ಲ.

ಆ) ಕಳೆದ ಸಾರಿ ಈ ಕುಟೀರ ಜ್ಯೋತಿ ಯೋಜನೆಯಡಿ ಹಣ ಖರ್ಚಾಗದೆ ವಾಪಸ್ ಆಗಿರುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ (2002-03) ಕುಟೀರ ಜ್ಯೋತಿ ಯೋಜನೆಯಡಿ ಪ್ರತಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರಕ್ಕೆ ಈ ಹಿಂದೆ 1000 ಫಲಾನುಭವಿಗಳ ಗುರಿಯನ್ನು ನಿಗದಿಪಡಿಸಲಾಗಿತ್ತು. ಈ ಮಿತಿಯನ್ನು ಈಗ ತೆಗೆದುಹಾಕಲಾಗಿದೆ. ಪ್ರತೀ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದಲ್ಲಿ ಮಿತಿ ಇಲ್ಲದೆ ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಬಹುದಾಗಿರುತ್ತದೆ. ಸಂಬಂಧಪಟ್ಟ ತಾಲ್ಲೂಕು ಪಂಚಾಯತ್/ಜಿಲ್ಲಾ ಪಂಚಾಯತ್‌ಗಳು ಯಾವುದೇ ಫಲಾನುಭವಿಗಳ ಪಟ್ಟಿಯನ್ನು ನೀಡದಿರುವ ಕಾರಣ, ಸದರಿ ಯೋಜನೆಯಡಿ ಫೆಬ್ರವರಿ 2003ರ ಅಂತ್ಯದವರೆಗೆ ಯಾವುದೇ ವಿದ್ಯುದೀಕರಣ ಕಾರ್ಯವನ್ನು ಕೈಗೊಂಡಿರುವುದಿಲ್ಲ.

ಈ) ಚಾಮರಾಜನಗರ ಜಿಲ್ಲೆ ದೊಡ್ಡರಾಯಪೇಟೆಯ 220 ಕೆ.ವಿ. ವಿದ್ಯುತ್ ಕೇಂದ್ರದ ಕಾಮಗಾರಿಯನ್ನು ಮಾರ್ಚ್ 2002ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ.

ಉ) ಹೌದು. ಈ ಕಾಮಗಾರಿಯ ನಿರ್ವಹಣೆಗೆ ಹಣಕಾಸಿನ ವ್ಯವಸ್ಥೆ ಆಗಬೇಕಾಗಿರುತ್ತದೆ. ಹಣಕಾಸಿನ ವ್ಯವಸ್ಥೆ ಆದ ನಂತರ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

ಊ) ಚಾಮರಾಜನಗರ ತಾಲ್ಲೂಕಿನ ಅಟ್ಟಿಗೊಳ್ಳಿಪುರ ಮತ್ತು ಪುಣ್ಯದ ಹುಂಡಿ ಗ್ರಾಮಗಳಲ್ಲಿ ತಲಾ ಒಂದು 66/11 ಕೆ.ವಿ. ಸಬ್ ಸ್ಟೇಷನ್ನನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ಏಪ್ರಿಲ್ 2001ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ. ಈ ಸಬ್ ಸ್ಟೇಷನ್ನಿನ ನಿರ್ಮಾಣಕ್ಕೆ ಅವಶ್ಯವಿರುವ ಭೂಮಿಯನ್ನು ಗುರುತಿಸಲಾಗಿದ್ದು, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ವಿಷಯವು ಇನ್ನೂ ಪ್ರಾರಂಭಿಕ ಹಂತದಲ್ಲಿದೆ. ಹಣಕಾಸಿನ ವ್ಯವಸ್ಥೆಯೂ ಆಗಬೇಕಾಗಿರುತ್ತದೆ. ಹಣಕಾಸಿನ ವ್ಯವಸ್ಥೆ ಆಗದೇ ನಿರ್ಮಾಣ ಕಾರ್ಯಗಳನ್ನು ಯಾವಾಗ ಪ್ರಾರಂಭಿಸಲಾಗುವುದು ಎಂಬುದರ ಬಗ್ಗೆ ತಿಳಿಸುವುದು ಈಗ ಕಷ್ಟಕರ.

ಶ್ರೀ ಸಿ. ಗುರುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ನನ್ನದು ಎರಡು ಪ್ರಶ್ನೆಗಳು. ಒಂದು ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ವಿಚಾರ, ಇನ್ನೊಂದು 220 ಸ್ಟೇಷನ್ ಮತ್ತು ಸಬ್ ಸ್ಟೇಷನ್ ಎರಡನ್ನೂ ಕ್ಲಬ್ ಮಾಡಿರುವುದರಿಂದ ಸ್ವಲ್ಪ ಹೆಚ್ಚು ಸಮಯವನ್ನು ಬಹಳ ಪ್ರಾಮುಖ್ಯತೆ ಇರುವುದರಿಂದ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಪ್ರಶ್ನೆ ಬಂದಂಥ ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿರುವುದು ನನ್ನ

ಅದೃಷ್ಟವೋ, ನನ್ನ ಜಿಲ್ಲೆಯ ಅದೃಷ್ಟವೋ ಗೊತ್ತಿಲ್ಲ. ನನಗಂತೂ ಬಹಳ ಸಂತೋಷವಾಗಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಭಾಗ್ಯ ಜ್ಯೋತಿ ಮತ್ತು ಕುಟೀರಜ್ಯೋತಿ ಎನ್ನತಕ್ಕಂಥಾದ್ದು ಬಡವರಿಗಾಗಿ ಇರತಕ್ಕಂಥ ಒಂದು ಕಾರ್ಯಕ್ರಮ. ನನ್ನ ಪ್ರಶ್ನೆ ಬಹುಶಃ ಕಾಂಗ್ರೆಸ್ಸ್ ಪಕ್ಷ ಇವತ್ತು ಅಧಿಕಾರಕ್ಕೆ ಬಂದಿರಬೇಕಾದರೆ ಆ ಬಡವರದ್ದೇ ನಿರ್ಣಾಯಕ ಎಂದು ನಾನು ಭಾವಿಸಿಕೊಂಡಿದ್ದೇನೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿದುಕೊಂಡಿದ್ದಾರೆ. ನನ್ನ ಪ್ರಶ್ನೆ ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ವರ್ಷ ಭಾಗ್ಯ ಜ್ಯೋತಿ ಕಾರ್ಯಕ್ರಮದಲ್ಲಿದ್ದ ಗುರಿ ಏನು? ಮತ್ತು ಸಾಧನೆ ಏನು? ಅದಕ್ಕೆ ಅವರು ಉತ್ತರ ಕೊಡುತ್ತಾರೆ 1999-2000ದಿಂದ ಈಚೆಗೆ ರಾಜ್ಯದಲ್ಲಿ ಭಾಗ್ಯಜ್ಯೋತಿ ಯೋಜನೆ ಜಾರಿಯಲ್ಲಿರುವುದಿಲ್ಲ.ಕೇವಲ ಕುಟೀರಜ್ಯೋತಿ ಯೋಜನೆ ಮಾತ್ರ ಜಾರಿಗೊಳಿಸಲಾಗುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ವರ್ಷ 2001-02ರಲ್ಲಿ ಕುಟೀರಜ್ಯೋತಿ ಯೋಜನೆ ಅಡಿಯಲ್ಲಿ 5 ಸಾವಿರ ಫಲಾನುಭವಿಗಳ ಮನೆಗಳನ್ನು ವಿದ್ಯುತ್ ಸಂಪರ್ಕ ಕಲ್ಪಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಆದರೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳು ಯಾವುದೇ ಫಲಾನುಭವಿಗಳ ಪಟ್ಟಿಯನ್ನು ನೀಡದಿದ್ದ ಕಾರಣ ಸದರಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ. ನನ್ನ ಪ್ರಶ್ನೆ ಮಾನ್ಯ ಇಂಧನ ಸಚಿವರಿಗೆ ಕೇಳತಕ್ಕಂಥಾದ್ದು, ಬಡವರಿಗೋಸ್ಕರ 5 ಸಾವಿರ ಗುರಿಯನ್ನು ಇಟ್ಟುಕೊಂಡು ಅಧಿಕಾರಿಗಳು ಫಲಾನುಭವಿಗಳ ಪಟ್ಟಿಯನ್ನು ಕೊಟ್ಟಿಲ್ಲವೆಂದರೆ ಇವರ ಆಡಳಿತದ ವೈಖರಿ ಏನು? ತಮ್ಮ ಕರ್ತವ್ಯ ಏನು ಮಾಡುತ್ತಿದ್ದಿರಿ? ತಾವು ಅಥವಾ ಮೇಲೆ ಕ್ರಮವನ್ನೇನು ತೆಗೆದು ಕೊಂಡಿದ್ದೀರಿ ಎಂಬುದು ಇಲ್ಲಿ ಬಹಳ ಮುಖ್ಯ.

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಕೆಲವು ಇಲಾಖೆಯವರ ಕರ್ತವ್ಯವಿರುತ್ತದೆ. ಜಿಲ್ಲಾ ಪಂಚಾಯಿತಿಯವರು ಅಥವಾ ಆ ಭಾಗದ ಶಾಸಕರು ಪಟ್ಟಿಯನ್ನು ನಮಗೆ ಕೊಟ್ಟಮೇಲೆ ಆ ಕುಟೀರ ಜ್ಯೋತಿಯಲ್ಲಾಗಲಿ, ಭಾಗ್ಯ ಜ್ಯೋತಿಯಲ್ಲಾಗಲಿ ವಿದ್ಯುತ್ ಸಂಪರ್ಕ ಒದಗಿಸಬೇಕು ಎಂಬುದು ನಮ್ಮ ಕೆಪಿಟಿಸಿಎಲ್‌ನ ಕರ್ತವ್ಯವಾಗಿರುತ್ತದೆ. ನಮಗೆ ಇದುವರೆಗೆ ಆ ಪಟ್ಟಿ ಬಂದಿಲ್ಲ. ತಾವು ಆ ಭಾಗದ ಶಾಸಕರಾಗಿ ಇನ್ನೂ ಏಕೆ ಪಟ್ಟಿ ಕೊಟ್ಟಿಲ್ಲವೆಂದು ಪರಿಶೀಲನೆ ಮಾಡಬಹುದಿತ್ತು. ತಾವು ಕ್ಷೇತ್ರದಲ್ಲಿ ಇರುತ್ತಿದ್ದಿರಿ, ಆ ಲೋಪದೋಷವನ್ನು ತಾವು ಸರಿ ಮಾಡಿದ್ದರೆ ಒಳ್ಳೆಯದಿತ್ತು ಎಂದು ನನಗನ್ನಿಸುತ್ತಿದೆ.

ಶ್ರೀ ಸಿ. ಗುರುಸ್ವಾಮಿ :- ನಾವು ಇದರಲ್ಲಿ ಎಷ್ಟು ಪ್ರಯತ್ನ ಪಟ್ಟಿದ್ದೇವೆಂದರೆ, ಅದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟು ಪ್ರಯತ್ನವನ್ನು ಮಾಡಿದ್ದೇವೆ. ಈ ಸರ್ಕಾರ ಬಂದು ಮೂರೂವರೆ ವರ್ಷಗಳಾಯಿತು, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಸಂಬಂಧಪಟ್ಟಂಥ ಮಂತ್ರಿಗಳು ಆ ಜಿಲ್ಲೆಗೆ ಹೋಗಿ ಅವರ ಇಲಾಖೆಯ ಬಗ್ಗೆ ರಿವ್ಯೂ ಮಾಡತಕ್ಕಂಥ ಆದೇಶವನ್ನು ತಾವು ಕೊಡದಿದ್ದರೆ ಬಹಳ ಅನಾಹುತವಾಗುತ್ತದೆ.

ಒಂದು ಇಲಾಖೆ ಎಂದಲ್ಲ ಮಾನ್ಯ ಮುಖ್ಯಮಂತ್ರಿಗಳೇ. ನಮ್ಮ ಚಾಮರಾಜನಗರ ಜಿಲ್ಲೆಗೆ ಯಾರ ಅನಿಷ್ಟವೋ ಏನೋ ಮುಖ್ಯಮಂತ್ರಿಗಳು ಬರುವುದಿಲ್ಲವೆಂದು ವದಂತಿ ಹುಟ್ಟಿಸಿಬಿಟ್ಟರು. ಅದನ್ನು ಈಗ ಮಂತ್ರಿಗಳಿಗೂ ಅನ್ವಯ ಮಾಡಿಬಿಟ್ಟರು. ಮಂತ್ರಿಗಳೂ ಬರುತ್ತಾ ಇಲ್ಲ. ಹಾಗಾಗಿ, ಈ ಕಾರ್ಯಕ್ರಮ ವಿಫಲವಾಗಲಿಕ್ಕೆ ಆ ಮಂತ್ರಿಗಳು ಜವಾಬ್ದಾರಿ ಹೊತ್ತುಕೊಂಡು

ಜಿಲ್ಲಾ ಕೇಂದ್ರದಲ್ಲಿ 6 ತಿಂಗಳಿಗೋ ಒಂದು ವರ್ಷಕ್ಕೋ ರಿವ್ಯೂ ಮಾಡಿದಾಗ ಮಾತ್ರ ಇದು ಆಗುತ್ತದೆ. ಮುಖ್ಯಮಂತ್ರಿಗಳು, ಎಲ್ಲಾ ಸಂಬಂಧಪಟ್ಟ ಮಂತ್ರಿಗಳಿಗೆ ನಿರ್ದೇಶನ ಕೊಡಬೇಕು. ತಾವು ಬರುವುದು ಬೇಡ, ತಾವು ಅಧಿಕಾರದಲ್ಲಿ ಇರಿ, ಏನೋ ದೃಷ್ಟಿ ಇಟ್ಟುಕೊಂಡಿದ್ದೀರಿ. ನಿಮಗೆ ಆಸೆ ಆಕಾಂಕ್ಷೆಗಳು ಇನ್ನೂ ಇದೆ, ನಾನು ಬೇಡ ಎನ್ನುವುದಿಲ್ಲ. ಆದರೆ, ಇದಾಗಬೇಕು ಸ್ವಾಮಿ. ಬಡವರಿಗೆ ಆಗತಕ್ಕ 5 ಸಾವಿರ ಕುಟೀರ ಜ್ಯೋತಿ ಸಂಪರ್ಕ ಆಗಿಲ್ಲ, ಮೂರು ವರ್ಷದಿಂದ ಏನೂ ಸಾಧನೆ ಮಾಡಲಿಲ್ಲವೆಂದರೆ, ನಾವು ನೀವೂ ಇಲ್ಲಿ ಏತಕ್ಕೆ ಇರಬೇಕೆಂಬುದು ಪ್ರಶ್ನೆ ಸ್ವಾಮಿ. ಇನ್ನು ಮುಂದಾದರೂ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಇದು ಏಕೆ ಆಗಿದೆ ಎಂದರೆ ಕೆ ಪಿ ಟಿ ಸಿ ಎಲ್ ಮತ್ತು ತಾಲ್ಲೂಕು ಪಂಚಾಯ್ತಿ ಘರ್ಷಣೆಯಿಂದ ಈ ರೀತಿ ಆಗಿರತಕ್ಕಂಥಾದ್ದು.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಈಗಲಾದರೂ ಮಾನ್ಯ ಶಾಸಕರು ಆ ಕ್ಷೇತ್ರಕ್ಕೆ ಇಷ್ಟು ಭಾಗ್ಯಜ್ಯೋತಿ ಬೇಕೆಂದು ಲಿಸ್ಟ್ ಒದಗಿಸಿದರೆ, ಆದಷ್ಟು ಬೇಗನೆ ಸಂಪರ್ಕ ಕೊಡಿಸುತ್ತೇನೆ.

ಅಧ್ಯಕ್ಷರು :- ಕೆ ಡಿ ಪಿ ಮೀಟಿಂಗ್ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುತ್ತಲ್ಲಾ ತಾವೂ ಅಲ್ಲಿ ಸದಸ್ಯರು, ಅಲ್ಲೇಕೆ ಕೇಳಲಿಲ್ಲ?

ಶ್ರೀ ಸಿ. **ಗುರುಸ್ವಾಮಿ** :- ಸ್ವಾಮಿ, ಶಾಸಕರ ಗಮನಕ್ಕೇ ಅದು ಬರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಕೆ ಡಿ ಬಿ ಸಭೆಯಲ್ಲಿ ಕೇಳುತ್ತಾರೆ. ಆದರೆ ಅಲ್ಲಿಗೆ ಕೆ ಇ ಬಿ ಅಧಿಕಾರಿಗಳೇ ಬರುವುದಿಲ್ಲ.

ಅಧ್ಯಕ್ಷರು :- ಹಾಗಿದ್ದರೆ ತೊಂದರೆ ನಿಮ್ಮ ಆಫೀಸರ್ಸ್‌ಗೆ ಏನು ಕಾರಣ ಎಂದು ಕೇಳಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಅಲ್ಲಿರತಕ್ಕ ತಾಲ್ಲೂಕು ಸಮಿತಿ, ಜಡ್ ಪಿ. ಅಸಿಸ್ಟೆಂಟ್ ಕಮೀಷನರ್ ಅವರು ಪಟ್ಟಿಯನ್ನು ನಮ್ಮ ಇಲಾಖೆಗೆ ಒದಗಿಸಿದರೆ ನಮ್ಮ ಕರ್ತವ್ಯವಾಗುತ್ತೆ. ಆ ಲಿಸ್ಟ್ ಪ್ರಕಾರ ಸಂಪರ್ಕ ಕೊಡುವುದಷ್ಟೇ ಕೆ ಪಿ ಟಿ ಸಿ ಎಲ್ ನವರ ಕರ್ತವ್ಯ.

ಶ್ರೀ ಸಿ. **ಗುರುಸ್ವಾಮಿ** :- ತಾವು ಶಾಸಕರು ಕರ್ತವ್ಯ ನಿರ್ವಹಿಸಲ್ಲವೇ, ಅಧಿಕಾರಿಗಳು ನಿರ್ವಹಿಸಿಲ್ಲವೇ ಎಂಬುದರ ವರದಿ ತರಿಸಿಕೊಳ್ಳಿ. ವರದಿ ತರಿಸಿಕೊಂಡು ಸಬ್‌ಮಿಟ್ ಮಾಡಿ.

ಅಧ್ಯಕ್ಷರು :- ಅವರು ಲಿಸ್ಟ್ ಕೊಟ್ಟರೆ ನಾವು ಮಾಡುತ್ತೇವೆ, ಇಲ್ಲದೇ ಹೋದರೆ ಸುಮ್ಮನೇ ಇರುತ್ತೇವೆಂದು ಕೆ ಪಿ ಟಿ ಸಿ ಎಲ್ ನವರು ಹೇಳುತ್ತಾರೆ.

ಶ್ರೀ ಸಿ. **ಗುರುಸ್ವಾಮಿ** :- ಇಬ್ಬರ ಕಚ್ಚಾಟದಲ್ಲಿ ಹೀಗೆ ಮಾಡಿದ್ದಾರೆ. ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ತಾಲ್ಲೂಕು ಪಂಚಾಯ್ತಿ ಮತ್ತು ಕೆ ಪಿ ಟಿ ಸಿ ಎಲ್ ನವರು ಅಧಿಕಾರಿಗಳ ಕಚ್ಚಾಟದಲ್ಲಿ ಇದಾಗಿದೆ. ಶಾಸಕನಾಗಿ, ನನ್ನ ಕರ್ತವ್ಯ ನಿರ್ವಹಿಸದೇ ಇದ್ದರೆ, ಅದಕ್ಕೆ ನಾನು ಜವಾಬ್ದಾರಿ. ಇದರ ಬಗ್ಗೆ ಬೇಕಾದರೆ ಎನ್‌ಕ್ವೈರಿ ಮಾಡಿಸಿ.

ಅಧ್ಯಕ್ಷರು :- ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮಾಡಬೇಕು.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಅವರು ಪಟ್ಟಿ ಕಳುಹಿಸಿಕೊಡಲಿ ನಾವು ಮಾಡುತ್ತೇವೆ. ಇನ್ನೂ ಸಾಕಷ್ಟು ಹಣ ಇದೆ. ಅವರು ಲಿಸ್ಟ್ ಕೊಟ್ಟ ಒಂದು ವಾರದಲ್ಲಿ ಕಾರ್ಯ

ಪ್ರಾರಂಭ ಮಾಡಿಸುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಿ. ಗುರುಸ್ವಾಮಿ :- ಮತ್ತೊಂದು ದೊಡ್ಡರಾಯನಪೇಟೆಯಲ್ಲಿ 220 ಕೆ ವಿ ಸ್ಟೇಷನ್ ಅಪ್‌ಗ್ರೇಡಾಗಿ ಪ್ರಾರಂಭವಾಯಿತು. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅದಕ್ಕೆ ಚಾಲನೆ ಕೊಟ್ಟಿದ್ದಾರೆ. ಆದರೆ ಏಕ ಕಾಲಕ್ಕೆ ಅದರ ಜೊತೆಗೇ 33 ಕೆ ವಿ ಸ್ಟೇಷನ್ 66 ಕೆ ವಿ ಸ್ಟೇಷನ್ ಅಪ್ ಗ್ರೇಡೇಷನ್ಸ್‌ಗೆ ಸಂಬಂಧಪಟ್ಟಿದ್ದು ಮತ್ತು ಹೊಸ ಸ್ಟೇಷನ್‌ಗಳೂ ಕೂಡ ಮಂಜೂರಾತಿಯಾಗಿದೆ. ಈ 220 ಕೆ ವಿ ಸ್ಟೇಷನ್ ಆಗಿ ಪ್ರಯೋಜವಾಗಿಲ್ಲ. ಚಾಮರಾಜನಗರದಿಂದ ರೈತರ ಜಾಥಾ ಬರುತ್ತಿದ್ದು, ಮುಖ್ಯಮಂತ್ರಿಗಳ ಭೇಟಿ ಮಾಡುವವರಿದ್ದಾರೆ. ಅಧಿಕಾರಿಗಳು ಇದೆಲ್ಲಾ ಅಪ್ರೂವಲ್ ಆಗಿದೆ. ಟೆಂಡರ್ ಸ್ಪೇಜ್‌ನಲ್ಲಿದೆ ಎಂಬ ಉತ್ತರವನ್ನು ಕೊಡುತ್ತಾರೆ. ಆದರೆ, ಪರಿಶೀಲನೆ ಹಂತದಲ್ಲಿದೆ, ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಕೈಗೊಳ್ಳಲಾಗುವುದು ಎಂಬ ಉತ್ತರ ಇಲ್ಲಿ ಬರುತ್ತದೆ. ಇದು ಯಾವುದು ಸತ್ಯ ಎಂಬ ಬಗ್ಗೆ ದಯಮಾಡಿ ಮುಖ್ಯಮಂತ್ರಿಗಳು ಭರವಸೆಯನ್ನು ಕೊಡಬೇಕು. ಮಂತ್ರಿಗಳು ವಿಸಿಟ್ ಮಾಡಿ ರಿವ್ಯೂ ಮಾಡುವಂಥಾದ್ದು ಮತ್ತು ಹೊನ್ನಹಳ್ಳಿ ಸ್ಟೇಷನ್ ಆಪ್ ಗ್ರೇಡೇಷನ್ ಮಾಡಿದರೆ, 220 ಕೆ ವಿ ಸಾಧ್ಯವಾಗುತ್ತದೆಯೋ? ನಿಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ನನಗೆ ಇದರ ಬಗ್ಗೆ ಸ್ಪಷ್ಟವಾದಂಥ ಭರವಸೆಯನ್ನು ಕೊಡಬೇಕು.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಈಗಾಗಲೇ ದೊಡ್ಡರಾಯನಪೇಟೆ 220 ಕೆ ವಿ ಸ್ಟೇಷನ್ ಕಾಮಗಾರಿ ಮಾರ್ಚ್ 2002 ಪೂರ್ತಿಗೊಂಡಿದೆ. ಈಗಾಗಲೇ ಅದು ಕಾರ್ಯ ನಿರ್ವಹಿಸುತ್ತಿದೆ. ಇನ್ನೊಂದು ಹೊನ್ನಹಳ್ಳಿ 33 ಕೆ ವಿ ಸ್ಟೇಷನ್‌ಗೆ 66 ಕೆ.ವಿ.ಗೆ ಮೇಲ್ದರ್ಜೆಗೇರಿಸುವುದನ್ನು ಅವರು ಕೇಳಿದ್ದಾರೆ. ಈಗಾಗಲೇ ಟರ್ನ್ ಕೀ ಬೇಸಿಸ್ ಮೇಲೆ ಕಾಂಟ್ರಾಕ್ಟ್ ಕೂಡ ಕೊಡಲಾಗಿದೆ. ಆಡಳಿತಾತ್ಮಕ ಮಂಜೂರಾತಿಯಾಗಿದೆ. 2-3 ತಿಂಗಳಲ್ಲಿ ಹಣಕಾಸಿನ ವ್ಯವಸ್ಥೆ ಮಾಡಿಕೊಂಡು, ಅದೂ ಕೂಡ ಕಾರ್ಯ ಪ್ರಾರಂಭ ಮಾಡಿಸುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತಿದ್ದೇನೆ. ಇನ್ನೂ ಎರಡು ಸಬ್ ಸ್ಟೇಷನ್ಸ್ ಅವರು ಕೇಳಿದ್ದಾರೆ. ಅಟ್ಟಿಗೊಳ್ಳಿಪುರ ಮತ್ತು ಪಣ್ಯದಹುಂಡಿ ಇವೆರಡೂ ಪ್ರೈಮರಿ ಹಂತದಲ್ಲಿದೆ. ಭೂ ಸ್ವಾಧೀನದ ಸಲುವಾಗಿ ಈಗಾಗಲೇ ಅಸಿಸ್ಟೆಂಟ್ ಕಮೀಷನರ್‌ರವರಿಗೆ 6 ಲಕ್ಷ ರೂಪಾಯಿ ದುಡ್ಡು ಕಳುಹಿಸಲಾಗಿದೆ. ಈ ವರ್ಷ ಪ್ರಾರಂಭಿಕ ಕಾರ್ಯ ಮಾಡಲಿಕ್ಕೆ 6 ಲಕ್ಷ ರೂ. ಬಜೆಟ್‌ನಲ್ಲಿ ಇಟ್ಟುಕೊಂಡಿದೆ. ಅದೂ ಟೆಕ್ನಿಕಲ್ ಅಪ್ರೂವಲ್ ಆಗಿದೆ. ಮೊದಲಿನದು 33 ಕೆ ವಿ. ಸ್ಟೇಷನ್ಸ್ ಬಗ್ಗೆ ಮೂರು ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಿಸುತ್ತೇನೆ.

ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ

104(1209) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ವಿವರ ನೀಡುವುದು);

ಆ) ಈ ದಿನಗೂಲಿ ನೌಕರರನ್ನು ಯಾವಾಗ ಖಾಯಂಗೊಳಿಸಲಾಗುವುದು;